APRIL 01, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ** ಯೋಜನೆ; ದಿನಗೂಲಿ ದರ, ಇಂದಿನಿಂದ 370 ರೂಪಾಯಿಗಳಿಗೆ, ಹೆಚ್ಚಳ.
- **ಬಯಲುಸೀಮೆಯ, ಬಾಗಲಕೋಟೆ ಜಿಲ್ಲೆ,** ಕುಳಲಿ ಗ್ರಾಮದಲ್ಲಿ ಸೇಬು ಬೆಳೆದು, ಯಶ ಕಂಡ ಕೃಷಿಕ, ಶ್ರೀಶೈಲ ತೇಲಿ.
- **ಹೊಸಪೇಟೆ ಬಳಿಯ,** ಕರೆಕಲ್ಲು ಗುಡ್ಡದಲ್ಲಿ, ನಾದ ಹೊಮ್ಮುವ ಬಂಡೆ ಗುರುತಿಸಿದ, ವಿಜಯನಗರ ತಿರುಗಾಟ ತಂಡ.
- **ಇಂದಿನಿಂದ ಮೂರು ದಿನಗಳ ಕಾಲ,** ವಿಕಸಿತ ಭಾರತ ಯುವ ಸಂಸತ್.

<><><>

**ಮಹಾತ್ಮ ಗಾಂಧಿ** ಉದ್ಯೋಗ ಖಾತ್ರಿ ಯೋಜನೆಯಡಿ, ಅಕುಶಲ ಕೂಲಿ ಕೆಲಸ ಮಾಡುವ, ಗ್ರಾಮೀಣ ಕೂಲಿಕಾರರ ದಿನಗೂಲಿ ದರವನ್ನು, ಇಂದಿನಿಂದ ಅನ್ವಯವಾಗುವಂತೆ, 370 ರೂಪಾಯಿಗಳಿಗೆ ಹೆಚ್ಚಿಸಿ, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ಆದೇಶ ಹೊರಡಿಸಿದೆ ಎಂದು, ಮಂಡ್ಯ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಕೆ.ಆರ್. ನಂದಿನಿ ತಿಳಿಸಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆಯಲ್ಲಿ,** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ, ಮಹಿಳಾ ಕೂಲಿಕಾರರನ್ನು ಪ್ರೋತ್ಸಾಹಿಸಲು, ಇಂದಿನಿಂದ ಜೂನ್ 30ರ ವರೆಗೆ, 'ಸ್ತ್ರೀ ಚೇತನ' ವಿಶೇ ' ಅಭಿಯಾನ, ಆಯೋಜಿಸಲಾಗಿದೆ ಎಂದು, ಉತ್ತರಕನ್ನಡ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಈಶ್ವರ ಕಾಂದೂ ತಿಳಿಸಿದ್ದಾರೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಮಹಿಳಾ ಕಾಯಕ ಬಂಧುಗಳಿಗೆ ಪ್ರೋತ್ಸಾಹ ಧನ, ಸಮಾನ ಕೆಲಸ ಸಮಾನ ಕೂಲಿ, ಗರ್ಭಿಣಿಯರಿಗೆ ಕೆಲಸದಲ್ಲಿ ರಿಯಾಯಿತಿ, ಕಂದಮ್ಮಗಳ ಆರೈಕೆಗಾಗಿ ಕೂಸಿನ ಮನೆ, ಜೀವ ವಿಮೆ ಸೇರಿದಂತೆ, ಹಲವು ಲಾಭದಾಯಕ ಅಂಶಗಳ ಕುರಿತು ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

<><><>

**ಹಿಮಾಲಯದ ತಪ್ಪಲಿನ, ಜಮ್ಮು–ಕಾಶ್ಮೀರ,** ಉತ್ತರಾಖಂಡ ಹಾಗೂ ಹಿಮಾಚಲ ಪ್ರದೇಶದಲ್ಲಿ ಈ ವರೆಗೆ ಬೆಳೆಸಲಾಗುತ್ತಿದ್ದ, ಸೇಬು ಹಣ್ಣನ್ನು, ರಾಜ್ಯದ ಬಯಲುಸೀಮೆಯ, ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕು, ಕುಳಲಿ ಗ್ರಾಮದಲ್ಲಿ ಪ್ರಪ್ರಥಮ ಬಾರಿಗೆ, ಪ್ರಾಯೋಗಿಕವಾಗಿ ಸೇಬು ಬೆಳೆದು, ಯಶ ಕಂಡಿದ್ದಾರೆ.. ಪ್ರಯೋಗಶೀಲ ಕೃಷಿಕ ಶ್ರೀಶೈಲ ತೇಲಿ. ಒಟ್ಟು ಮೂರು ಪ್ರಜಾತಿಯ, 2 ಸಾವಿರದ 6 ನೂರು ಸೇಬು ಗಿಡಗಳನ್ನು, 7 ಎಕರೆ ಪ್ರದೇಶದಲ್ಲಿ ಸಾವಯವ ಮಾದರಿಯಲ್ಲಿ ಬೆಳೆಸಿ, ಎರಡು ಫೀಕು ಪಡೆದು, ಸ್ಥಳೀಯ ಮಾರುಕಟ್ಟೆಯಲ್ಲೇ ಮಾರಿ, ಲಾಭ ಪಡೆದಿದ್ದಾರೆ, ಶ್ರೀಶೈಲ ತೇಲಿ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

**ಸೇಬು ಕೃಷಿಕ ಶ್ರೀಶೈಲ ತೇಲಿ ಧ್ವನಿ 45 ಸೆಕೆಂದುಗಳು**

<><><>

**ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ಮತ್ತು** ಅಂಕೋಲಾ ತಾಲೂಕಿನಲ್ಲಿ, ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ, ವಾಣಿಜ್ಯ ಬಂದರುಗಳ ನಿರ್ಮಾಣಕ್ಕೆ, ಸ್ಥಳೀಯ ಮೀನುಗಾರರು ವಿರೋಧ ವ್ಯಕ್ತ ಪಡಿಸಿದ್ದಾರೆ.

<><><>

**ಹೊನ್ನಾವರದ ಟೊಂಕ ಪ್ರದೇಶದಲ್ಲಿ,** ಅಳಿವಿನಂಚಿನ ಅಪರೂಪದ, ಹಸಿರು ಕಡಲಾಮೆ, 'ಆಲಿವ್ ರಿಡ್ಲೆ ಟರ್ಟಲ್'ಗಳ ಹೆರಿಗೆ ತಾಣವನ್ನು, ನೂತನ ಬಂದರನ್ನು ಸಂಪರ್ಕಿಸಲಿರುವ ರಸ್ತೆ ನಾಶಪಡಿಸಲಿದೆ ಎಂದು, ಹೊನ್ನಾವರ ಫೌಂಡೇಷನ್ ಸದಸ್ಯರು, ಆತಂಕ ವ್ಯಕ್ತಪಡಿಸಿದ್ದಾರೆ.

<><><>

**ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ** ಕಾಪಾಡುವ ಅನಿವಾರ್ಯತೆ, ಜೊತೆಗೆ, ದೇವಭಾಗ್ ಹಾಗೂ ಮಾಜಾಳಿಯಲ್ಲಿ, ಬಂದರು ತಡೆಗೋಡೆಯಿಂದ, ಕಡಲ್ಕೊರೆತದ ಸಮಸ್ಯೆ ತಲೆದೋರಿದ ನಿದರ್ಶನವಿದೆ ಎನ್ನುತ್ತಾರೆ, ಕುಮಟಾದ ಕಡಲ ಜೀವಶಾಸ್ತ್ರಜ್ಞ ವಿ.ಎನ್.ನಾಯಕ್.

<><><>

**ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ,** ರಾಜ್ಯದ 197 ಜನ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ, 2024ನೇ ಸಾಲಿನ ಮುಖ್ಯಮಂತ್ರಿ ಪದಕಗಳನ್ನು ಪ್ರಕಟಿಸಲಾಗಿದೆ. ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿಯ ಉಪ ಪೊಲೀಸ್ ವರಿಷ್ಠಾಧಿಕಾರಿ ಅರವಿಂದ ಕಲಗುಜ್ಜಿ ಹಾಗೂ ಮಾಳೂರು ಹಾಗೂ ಆಗುಂಬೆ ಆರಕ್ಷಕ ವೃತ್ತ ನಿರೀಕ್ಷಕ, ಸಿ.ಎಂ. ಶ್ರೀಧರ್ ಪದಕಕ್ಕೆ ಭಾಜನರಾಗಿದ್ದಾರೆ. ಜನಸ್ನೇಹಿ ನಡವಳಿಕೆ, ಅಪರಾಧ ಪ್ರಕರಣಗಳ ನಿಯಂತ್ರಣ, ಜನಸಂಪರ್ಕ ಹಾಗೂ ಸೌಹಾರ್ದಯುತ ಸಂಬಂಧಗಳಿಂದ, ಕಾನೂನು, ಸುವ್ಯವಸ್ಥೆ ಬಲಗೊಂಡು, ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಿದ ಹಿರಿಮೆ, ಇವರದ್ದಾಗಿದೆ.

<><><>

**ನಾಳೆ ಬೆಳಗ್ಗೆ 8 ಗಂಟೆಗೆ,** ಪೊಲೀಸ್ ಧ್ವಜ ದಿನಾಚರಣೆ ಹಿನ್ನೆಲೆ, ಜಿಲ್ಲಾ ಪೊಲೀಸ್ ಕವಾಯತು ಮೈದಾನಗಳಲ್ಲಿ, ರಾಜ್ಯಾದ್ಯಂತ ಸಿದ್ಧತೆ ನಡೆದಿದೆ.

<><><>

**ವಿಜಯನಗರ ಜಿಲ್ಲೆ, ಹೊಸಪೇಟೆಯ,** ದೇವಲಾಪುರ ಬಳಿಯ, ಅಪ್ಪಳಪ್ಪನ ಕೆರೆಯ ಹತ್ತಿರ, ಕರಡಿಗಳ ವೀಕ್ಷಣೆ ಹಾಗೂ ಕಾವಲು ಗೋಪುರದ ಬಳಿ, ಕರೆಕಲ್ಲು ಗುಡ್ಡದಲ್ಲಿ, ನಾದ ಹೊರಡಿಸುವ ಬಂಡೆಗಳಿವೆ. ಕ್ರಿಸ್ತ ಪೂರ್ವ 3 ಸಾವಿರ ವರ್ಷಗಳ ಹಿಂದಿನ, ಆದಿ ಮಾನವ ನೆಲೆಸಿದ್ದ ಕುರುಹಾಗಿ, ವಿಜಯನಗರ ತಿರುಗಾಟ ತಂಡ ಗುರುತಿಸಿದೆ ಎಂದು, ಡಾಕ್ಟರ್ ಗೋವಿಂದ ತಿಳಿಸಿದ್ದಾರೆ.

<><><>

**ಕೇಂದ್ರದ ಯುವ ವ್ಯವಹಾರ,** ಹಾಗೂ ಕ್ರೀಡಾ ಸಚಿವಾಲಯ, ಇಂದಿನಿಂದ ಮೂರು ದಿನಗಳ ವರೆಗೆ, ವಿಕಸಿತ ಭಾರತ ಯುವ ಸಂಸತ್ ಆಯೋಜಿಸಿದೆ. ಕರ್ನಾಟಕ ಸೇರಿದಂತೆ, ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ, 75 ಸಾವಿರಕ್ಕೂ ಹೆಚ್ಚು ಯುವಜನತೆ, 'ಮಾಯ್ ಭಾರತ್ ಪೋರ್ಟಲ್' ಮೂಲಕ ತಮ್ಮ ವಿಡಿಯೋಗಳನ್ನು ಸಲ್ಲಿಸಿದ್ದಾರೆ. ಇದು ರಾಷ್ಟ್ರದ ಭವಿ ್ಯವನ್ನು ರೂಪಿಸುವ, ಯುವಜನರ ಉತ್ಸಾಹ ಮತ್ತು ಬದ್ಧತೆಯನ್ನು ಪ್ರದರ್ಶಿಸಲು, ರೂಪಿಸಲಾದ ವೇದಿಕೆ.

<><><>

**ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿ,** ಇಂದು ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಮಹಾಯೋಗಿಗಳ, 118 ನೇ ಜಯಂತಿ ಹಾಗೂ ಗುರು ವಂದನಾ ಮಹೋತ್ಸವ ನಡೆಯಲಿದೆ. ಕೇಂದ್ರ ರಕ್ಷಣಾ ಖಾತೆ ಸಚಿವ ರಾಜನಾಥ್ ಸಿಂಗ್ ಜಯಂತ್ಯುತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

**ಮೈಸೂರಿನ ಜೆ.ಎಸ್.ಎಸ್. ಮಹಾವಿದ್ಯಾಲಯದ,** ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕರು, ಹುಣಸೂರು ತಾಲೂಕಿನ, ಮಂಡಿ ಹಾಡಿ ಹಾಗೂ ಅಸ್ವಾಳ್ ಹಾಡಿಗಳ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸುಣ್ಣ, ಬಣ್ಣ ಹಚ್ಚಿ, ಶಾಲಾ ಮಕ್ಕಳನ್ನು ಆಕರ್ಷಿಸಲು ಗೋಡೆಗಳ ಮೇಲೆ ಚಿತ್ರ ಬಿಡಿಸಿ, ಶಾಲೆಯ ಅಂದ ಹೆಚ್ಚಿಸಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲೂಕು,** ಗುರುಪುರ ಗ್ರಾಮದಲ್ಲಿ ಕಾಡಾನೆ ದಾಳಿಗೆ, ರೈತ ವೆಂಕಟೇಶ ಮೃತಪಟ್ಟ ಘಟನೆ ವರದಿಯಾಗಿದೆ. ಜಾನುವಾರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹಾಕುತ್ತಿದ್ದ ವೇಳೆ, ಕಾಡಾನೆ ದಾಳಿ ನಡೆಸಿದೆ. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಮೂಡಿಗೆರೆ ಹಾಗೂ ತರೀಕೆರೆ ತಾಲೂಕಿನ ಹಲವೆಡೆ, ಕಾಡಾನೆಗಳು ಸಂಚರಿಸುತ್ತಿದ್ದು, ಸಾರ್ವಜನಿಕರು ಮುಂಜಾಗ್ರತೆ ವಹಿಸುವಂತೆ, ಕೋರಲಾಗಿದೆ. ಜನ ವಸತಿಯತ್ತ ನುಗ್ಗಿರುವ ಕಾಡಾನೆಗಳನ್ನು ಕಾಡಿಗೆ ತಿರುಗಿಸಲು, ಕಾರ್ಯಾಚರಣೆ ನಡೆದಿದೆ.

<><><>

**ಈ ತಿಂಗಳ 3 ಹಾಗೂ 4 ರಂದು,** ಉತ್ತರಕನ್ನಡ, ದಕ್ಷಿಣಕನ್ನಡ, ಉಡುಪಿ, ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಕೊಡಗು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ, ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆ 'ಯೆಲ್ಲೋ ಅಲರ್ಟ್' ಘೋಷಿಸಿದೆ. ಆಲಿಕಲ್ಲಿನ ಮಳೆಯಾಗುವ ಸಾಧ್ಯತೆ ಇದ್ದು, 3 ರಿಂದ 4 ಡಿಗ್ರಿಗಳಷ್ಟು ತಾಪಮಾನ, ಕುಸಿಯುವ ಸಾಧ್ಯತೆ ಇದೆ ಎಂದು, ಪ್ರಕಟಿಸಿದೆ.

<><><>

**ಹಸಿವು ಹಾಗೂ ದಾನ, ಧರ್ಮದ** ಮಹತ್ವವನ್ನು ಸಾರುವ, ಈದುಲ್ ಫಿತರ್, ರಂಜಾನ್ ಹಬ್ಬವನ್ನು, ಈದ್ಗಾ ಹಾಗೂ ಪ್ರಾರ್ಥನಾ ಮಂದಿರಗಳಲ್ಲಿ, ವಿಶೇ ’ ಪ್ರಾರ್ಥನೆ ಸಲ್ಲಿಸಿ, ಮುಸ್ಲಿಂ ಬಾಂಧವರು ನಾಡಿನಾದ್ಯಂತ ಆಚರಿಸಿದ, ವರದಿಗಳು ಬಂದಿವೆ.

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು,** ಇಂದು ಮುಂಬೈಯಲ್ಲಿ ಆಯೋಜಿತ, ಭಾರತೀಯ ರಿಸರ್ವ್ ಬ್ಯಾಂಕ್‌ನ, 90ನೇ ವಾರ್ಷಿಕೋತ್ಸವದ, ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

<><><>

**ಹಾಲು, ಬಸ್ ಪ್ರಯಾಣ ದರ ಸೇರಿದಂತೆ,** ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ, ನಾಳೆ ಬಿ.ಜೆ.ಪಿ ಆಯೋಜಿಸಿರುವ, ಅಹೋರಾತ್ರಿ ಧರಣಿಯ ಭಿತ್ತಿಪತ್ರವನ್ನು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು.

<><><>

**ತಾಯಿ ಮತ್ತು ಶಿಶು ಮರಣ** ತಪ್ಪಿಸುವ ಉದ್ದೇಶದಿಂದ, ಆರೋಗ್ಯ ಇಲಾಖೆ, "ಕಿಲ್ಕಾರಿ" ಎಂಬ ಉಚಿತ ಮೊಬೈಲ್ ಆರೋಗ್ಯ ಸೇವೆ ಜಾರಿಗೆ ತಂದಿದೆ. 1–4–4–2–3 ಕ್ಕೆ ಕರೆ ಮಾಡಿ, ಆಲಿಸಬಹುದು.

<><><>

**ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ,** ಎಂದಿನಂತೆ ಇಂದೂ ಸಹ, ಶಾಲಾ ಮಕ್ಕಳು ಹಾಗೂ ಪ್ರವಾಸಿಗರಿಗಾಗಿ ಕಾರ್ಯ ನಿರ್ವಹಿಸಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ** ಯೋಜನೆ; ದಿನಗೂಲಿ ದರ, ಇಂದಿನಿಂದ 370 ರೂಪಾಯಿಗಳಿಗೆ, ಹೆಚ್ಚಳ.
- **ಬಯಲುಸೀಮೆಯ, ಬಾಗಲಕೋಟೆ ಜಿಲ್ಲೆ,** ಕುಳಲಿ ಗ್ರಾಮದಲ್ಲಿ ಸೇಬು ಬೆಳೆದು, ಯಶ ಕಂಡ ಕೃಷಿಕ, ಶ್ರೀಶೈಲ ತೇಲಿ.
- **ಹೊಸಪೇಟೆ ಬಳಿಯ,** ಕರೆಕಲ್ಲು ಗುಡ್ಡದಲ್ಲಿ, ನಾದ ಹೊಮ್ಮುವ ಬಂಡೆ ಗುರುತಿಸಿದ, ವಿಜಯನಗರ ತಿರುಗಾಟ ತಂಡ.
- **ಇಂದಿನಿಂದ ಮೂರು ದಿನಗಳ ಕಾಲ,** ವಿಕಸಿತ ಭಾರತ ಯುವ ಸಂಸತ್.

<><><>